ಶ್ರೀ ಜಿ. ಬಸವಣ್ಣೆಪ್ಪ.—ಮಾನ್ಯ ಅಧ್ಯಕ್ಷರೇ, ಇದು ಒಂದು ದೊಡ್ಡ ಸಮಸ್ಯೆ. ಇದನ್ನು ತಿಳಿಸುವ ಸಲುವಾಗಿ ನಮ್ಮ ಇಲಾಖೆಯವರು ಒಂದು ಸಾಕ್ಷಚಿತ್ರವನ್ನು ಮಾಡಿದ್ದಾರೆ. ಈ ದೇವದಾಸಿ ಪದ್ಧತಿಯಿಂದ ಏನೇನು ತೊಂದರೆಗಳಾಗುತ್ತವೆ, ಯಾವ ಯಾವ ಖಾಯಿಲೆಗಳು ಬರುತ್ತದೆ ಎಂಬುದರ ಬಗ್ಗೆ ಸಾಕ್ಷಚಿತ್ರವನ್ನು ತೆಗೆದಿದ್ದು ಅದನ್ನು ಆ ಭಾಗದಲ್ಲಿ ಪ್ರದರ್ಶನ ಕೂಡ ಮಾಡಿದ್ದೇವೆ. ನಾನೂ ಕೂಡ ನೋಡಿದ್ದೇನೆ. ಅದನ್ನು ದೆಹಲಿಯ ಒಂದು ಚಿತ್ರ ತಾಯಾರಕರು ನಿರ್ಮಿಸಿದ್ದಾರೆ. ಆ ಚಿತ್ರವನ್ನು ಪ್ರದರ್ಶಿಸಲು ಕೊಡುತ್ತೇವೆ. ಇದರಿಂದ ಸಮಾಜದಲ್ಲಿ ಒಳ್ಳೆಯ ಪರಿಣಾಮವಾಗುತ್ತದೆ. ಸರ್ಕಾರ ಇದರ ನಿರ್ಮೂಲನಕ್ಕೆ ಬೇಕಾದ ಎಲ್ಲ ರೀತಿಯ ಸಹಕಾರವನ್ನು ಕೊಡುತ್ತದೆಂದು ಹೇಳುತ್ತೇನೆ.

ಶ್ರೀ ಐ.ಬಿ. ಶಂಕರ್.—ಮಾನ್ಯ ಮಂತ್ರಿಗಳು ದೇವದಾಸಿ ಮಕ್ಕಳ ಸಲುವಾಗಿ ಎರಡು ಕಡೆ ಪುನರ್‌ವಸತಿ ಸೌಲಭ್ಯವನ್ನು ಕಲ್ಪಿಸಿದ್ದೇವೆಂದು ಹೇಳಿದರು. ಅವರಿಗಾಗಿಯೇ ಪ್ರತ್ಯೇಕವಾದ ಹಾಸ್ಟೆಲ್‌ಗಳನ್ನು ತೆರೆದರೆ ಸಮಾಜದಲ್ಲಿ ಇವರನ್ನು ದೇವದಾಸಿ ಮಕ್ಕಳೆಂದು ದೂರಿಕರಿಸುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಅವರಿಗೆ ಜನರಲ್ ಹಾಸ್ಟೆಲ್‌ಗಳಲ್ಲಿ ಅವಕಾಶವನ್ನು ಮಾಡಿಕೊಟ್ಟರೆ ಸಾರ್ವಜನಿಕರಲ್ಲಿ ಬೆರೆಯುವುದಕ್ಕೆ ಮತ್ತು ವಿದ್ಯಾವಂತರನ್ನಾಗಿ ಮಾಡಿ ಮುಂದುವರಿಸುವುದಕ್ಕೆ ಅನುವು ಮಾಡಿ ಕೊಟ್ಟಂತಾಗುತ್ತದೆ. ಇವರನ್ನು ಪ್ರತ್ಯೇಕವಾಗಿ ಇಟ್ಟರೆ ಸಮಾಜದಲ್ಲಿ ಇವರು ದೇವದಾಸಿಯರ ಮಕ್ಕಳು ಎಂದು ಎತ್ತಿ ತೋರಿಸಿದಂತಾಗುತ್ತದೆಂದು ಹೇಳುತ್ತೇನೆ.

ಶ್ರೀ ಜಿ. ಬಸವಣ್ಣೆಪ್ಪ.—ತಮ್ಮ ಸಲಹೆ ಒಳ್ಳೆಯ ಸಲಹೆ ಎಂದು ನಾನು ಭಾವಿಸುತ್ತೇನೆ.

ಅಧ್ಯಕ್ಷರು.—ಶ್ರೀ ಐ ಬಿ. ಶಂಕರ್‌ರವರ ಚುಕ್ಕೆ ಪ್ರಶ್ನೆ (೧೮೭ (೬೬೩), ಇದನ್ನು ಮುಂದೆ ಹಾಕಲಾಗಿದೆ.

ಶ್ರೀ ಎಸ್.ಎಂ. ಅಡ್ಯಂತಾಯರವರ ಚುಕ್ಕೆ ಪ್ರಶ್ನೆ (೧೮೮) (೭೦೮) ಸದಸ್ಯರು ಗೈರು ಹಾಜರಿ.

ಶ್ರೀ ಹೆಚ್. ಸಿ. ಮಹಾದೇವಪ್ಪನವರ ಚುಕ್ಕೆ ಪ್ರಶ್ನೆ ೧೮೯ (೭೨೪) ಇದನ್ನು ಮುಂದೆ ಹಾಕಲಾಗಿದೆ.

ಸಾಲಗಳನ್ನು ಮನ್ನಾ ಮಾಡದೆ ಇರುವುದು.

೭೯೨. ಶ್ರೀ ಎ. ಕೃಷ್ಣಪ್ಪ ಎಂ.ಎಲ್.ಎ.—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನ ಸಾಲದಿಂದ ತೆಗೆಸಿದ ಬಾವಿ ವಿಫಲವಾದರೆ ಆ ಸಾಲವನ್ನು ಮನ್ನಾ ಮಾಡಲಾಗುತ್ತದೆಯೆ;

ಆ) ಹಾಗಿದ್ದಲ್ಲಿ ಯಾವ ಆಧಾರದ ಮೇಲೆ ಸಾಲವನ್ನು ಮನ್ನಾ ಮಾಡಲಾಗುವುದು.

ಇ) ಮಾಗಡಿ ತಾಲ್ಲೂಕಿನ ತಾವರೇಕೆರೆ ಹೋಬಳಿ ವರ್ತೂರು ಗ್ರಾಮದ ಸರ್ವೆ ನಂಬರ್ ೪೨ರಲ್ಲಿ ತೆಗೆಸಲಾದ ಬಾವಿಗೆ ಮಾಗಡಿ ಶಾಖೆಯ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನಿಂದ ಸಾಲವನ್ನೇನಾದರೂ ಮಂಜೂರು ಮಾಡಲಾಗಿದೆಯೆ;

ಈ) ಹಾಗಿದ್ದಲ್ಲಿ ಯಾವಾಗ, ಯಾರಿಗೆ ಹಾಗೂ ಎಷ್ಟು ಹಣವನ್ನು ಮಂಜೂರು ಮಾಡಲಾಗಿದೆ.

ಉ) ಈ ಬಾವಿ ವಿಫಲವಾಗಿರುವುದು ನಿಜವೆ; ಹಾಗಿದ್ದಲ್ಲಿ ಸಾಲ ಮನ್ನಾ ಕೋರಿ ಅರ್ಜಿಗಳು ಏನಾದರೂ ಬಂದಿದೆಯೆ;

ಊ) ಹಾಗಿದ್ದಲ್ಲಿ ಈ ದಿಸೆಯಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು;

ಶ್ರೀ ಹೆಚ್. ಏಕಾಂತಯ್ಯ (ಸಹಕಾರ ಮಂತ್ರಿಗಳು).—

ಅ) ಬಾವಿ ವಿಫಲಗೊಂಡಲ್ಲಿ, ರೈತರಿಗೆ ಜಾರಿಯಲ್ಲಿರುವ ಸರ್ಕಾರದ ಆದೇಶದ ಪ್ರಕಾರ, ಪರಿಹಾರವನ್ನು ಮಂಜೂರು ಮಾಡಲಾಗುತ್ತದೆ.

ಆ) ಜಾರಿಯಲ್ಲಿರುವ ಸರ್ಕಾರದ ಆದೇಶದ ಪ್ರಕಾರ ಬಾವಿಯಲ್ಲಿ ದೊರಕುವ ನೀರಿನ ಪ್ರಮಾಣದ ಆಧಾರದ ಮೇಲೆ, ಬಾವಿಯನ್ನು ವಿಫಲ ಎಂದು ಪರಿಗಣಿಸಲಾಗುವುದು.

ಇ) ಮಾಗಡಿ ತಾಲ್ಲೂಕು ವರ್ತೂರು ಗ್ರಾಮದ ಸರ್ವೆ ನಂ. ೨೨ ರಲ್ಲಿ ಬಾವಿ ತೋಡಿಸಲು ಮಾಗಡಿ ಪ್ರಾಥಮಿಕ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನಿಂದ ಸಾಲ ಮಂಜೂರು ಮಾಡಿರುತ್ತದೆ,

ಈ) ಶ್ರೀಮತಿ ಬಿ ಕಮಲ್ಲಮ್ಮ ಕೋಂ ಲಕ್ಷ್ಮೀನಾರಾಯಣ, ಕುರುಬರಹಳ್ಳಿ ಇವರಿಗೆ ಸಾಲ ಮಂಜೂರಾಗಿರುತ್ತದೆ. ಸಾಲ ವಿತರಣೆಯ ವಿವರಗಳು ಕೆಳಗಿನಂತಿವೆ.

	ದಿನಾಂಕ:	ಮೊತ್ತ
ಮೊದಲನೇ ಕಂತು	೨೮-೯-೧೯೬೬ ರಂದು	ರೂ ೧,೫೦೦-೦೦
ಎರಡನೇ ಕಂತು	೨೬-೧೧-೧೯೬೬ ರಂದು	ರೂ. ೧,೨೦೦-೦೦
ಮೂರನೇ ಕಂತು	೧೬-೮-೧೯೬೭ ರಂದು	ರೂ. ೯೯೦-೦೦
ನಾಲ್ಕನೇ ಕಂತು	೨೫-೫-೧೯೭೦ ರಂದು	ರೂ. ೪೧೦-೦೦
	ಒಟ್ಟು	೪,೧೦೦-೦೦

ಉ) ಹೌದು

ಊ) ಬೆಂಗಳೂರು ಜಿಲ್ಲಾಧಿಕಾರಿಗಳು ತಮ್ಮ ದಿನಾಂಕ ೧೩-೧೦-೧೯೭೮ರ ಆದೇಶದಲ್ಲಿ ಪರಿಹಾರ ಮಂಜೂರು ಮಾಡಿದ್ದಾರೆ. ಆಗ ಜಾರಿಯಲ್ಲಿದ್ದ ಸರ್ಕಾರೀ ಆದೇಶದ ಪ್ರಕಾರ, ಇಡೀ ಬಡ್ಡಿಯನ್ನು ಮನ್ನಾ ಮಾಡಲಾಗಿದೆ.

ಶ್ರೀ ಎ. ಕೃಷ್ಣಪ್ಪ,—ಬಾವಿ ವಿಫಲಗೊಂಡಲ್ಲಿ, ರೈತರಿಗೆ ಪರಿಹಾರವನ್ನು ಮಂಜೂರು ಮಾಡಲಾಗುತ್ತದೆಂದು ಹೇಳಿರುತ್ತೀರಿ, ಪರಿಹಾರ ಎಂದರೆ ಏನು? ಯಾವರೀತಿ ಪರಿಹಾರವನ್ನು ಕೊಡುತ್ತೀರಿ? ಎಷ್ಟು ಹಣವನ್ನು ಪರಿಹಾರವೆಂದು ಕೊಡುತ್ತೀರಿ? ವಿಫಲವಾದ ಬಾವಿಗಳಿಗೆ ತೆಗೆದುಕೊಂಡ ಸಾಲವನ್ನೇ ಮನ್ನಾ ಮಾಡುವ ಆಜ್ಞೆಯನ್ನು ಏನಾದರೂ ಹೊರಡಿಸಿರುವಿರೇ ಹೇಗೆ ಎಂದು ಕೇಳುತ್ತೇನೆ,

ಶ್ರೀ ಪೆಚ್, ವಿಕಾಂತಯ್ಯ.—ಪರಿಹಾರವೆಂದರೆ ಕೆಲವು ಸಂದರ್ಭಗಳಲ್ಲಿ ಬಡ್ಡಿ ಮತ್ತು ಅಸಲನ್ನು ಒಳಗೊಂಡಿರುತ್ತದೆ. ಆಗಾಗ್ಗೆ ಕಾನೂನಿನಲ್ಲಿ ಬದಲಾವಣೆಯಾಗುತ್ತದೆ. ಜಾರಿಯಲ್ಲಿರುವ ಆದೇಶದಂತೆ ಪರಿಹಾರವನ್ನೂ ಕೊಡುತ್ತೇವೆ.

ಶ್ರೀ ಎ. ಕೃಷ್ಣಪ್ಪ.— ಪರಿಹಾರ ಎಷ್ಟು ಕೊಡುತ್ತೀರಿ? ರಾಜ್ಯದಲ್ಲಿ ೧೯೭೩ ರಿಂದ ಹಣಕಾಸಿನ ತೊಂದರೆ ಇದೆ ಎಂದು ಹೇಳುತ್ತೀರಿ, ಆದರೆ ಆರ್ಡರ್ ಇದೆ. ಆ ಆರ್ಡರ್ ಪ್ರಕಾರ ಎಷ್ಟು ಕೊಡುತ್ತೀರಿ ಎನ್ನುವುದು ಒಂದು. ಪರಿಹಾರ ಒಂದೇ ಅಲ್ಲ. ಸಾಲವನ್ನೂ ಕೂಡ ಮನ್ನಾ ಮಾಡಬೇಕೆನ್ನುವುದನ್ನು ಸಹ ತೀರ್ಮಾನ ಮಾಡುತ್ತೀರಾ?

ಶ್ರೀ ಪೆಚ್. ವಿಕಾಂತಯ್ಯ.—ಆಗ ಜಾರಿಯಲ್ಲಿದ್ದಂತಹ ಆದೇಶದ ಪ್ರಕಾರ ಪೂರಾ ಬಡ್ಡಿಯನ್ನು ಮನ್ನಾ ಮಾಡಿದ್ದೇವೆ. ಅಸಲಿನಲ್ಲಿ ಶೇಕಡ ೨೫ ರಿಂದ ೫೦ರವರೆಗೆ ಮನ್ನಾ ಮಾಡುವ ಆದೇಶ ಆಗ ಜಾರಿಯಲ್ಲಿತ್ತು. ಈಗ ಜಾರಿಯಲ್ಲಿರುವ ಆದೇಶದಂತೆ ನಾವು ಪೂರಾ ಮನ್ನಾ ಮಾಡಬಹುದು.

ಶ್ರೀ ಯು. ಭೂಪತಿ – ವಿಫಲವಾದ ಬಾವಿ ಬಗ್ಗೆ ರೈತರಿಗೆ ಬಹಳಷ್ಟು ಕಡೆ ಅನ್ಯಾಯವಾಗುತ್ತಿದೆ, ನಮ್ಮ ಕ್ಷೇತ್ರದಲ್ಲೂ ಆಗಿದೆ. ಅಲ್ಲಿ ಏನಾಗಿದೆ ಎಂದರೆ ಬಾವಿ ವಿಫಲವಾದ ನಂತರ ಜಿಯಾಲಜಿಸ್ಟ್ ಬಂದು ಸರ್ವೆ ಮಾಡಿ ಪರೀಕ್ಷೆ ಮಾಡಿ ನೀರು ಬಿದ್ದಿಲ್ಲವೆಂದರೆ ಇಲ್ಲವೆಂದು ಹೇಳಬೇಕು. ಅದಕ್ಕೋಸ್ಕರ ಅಸಿಸ್ಟೆಂಟ್ ಕಮೀಷನರ್ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ಮಾಡಲಾಗಿದೆ. ಆದರೆ ಆ ಕಮಿಟಿಯವರು ರೆಗ್ಯುಲರ್ ಆಗಿ ಸಭೆ ಸೇರುವುದಿಲ್ಲ ಅವರಂ ಪಿಎಲ್‌ಡಿ ಬ್ಯಾಂಕಿಗೆ ರಿಪೋರ್ಟ್ ಕಳುಹಿಸಬೇಕು. ಅವರು ಸರಿಯಾಗಿ ರಿಪೋರ್ಟ್ ಕಳುಹಿಸದೆ ಇರುವುದರಿಂದ ವರ್ಷಾನುಗಟ್ಟಲೆ ತಡವಾಗುತ್ತದೆ. ಹಳೇಕೋಟೆ ವೀರಭದ್ರಸ್ವಾಮಿ ಎಂಬುವವರು ೬೫-೬೬ರಲ್ಲಿ ಸಾಲ ತೆಗೆದುಕೊಂಡಿದ್ದಾರೆ,

ಮತ್ತು ಒಂದು ಪಂಪ್‌ಸೆಟ್ಟನ್ನು ಕೂಡಿಸಿದ್ದಾರೆ. ಇವುಗಳ ಮೇಲೆ ಜಿಯಾಲಜಿಸ್ಟ್ ಆ ನೀರು ವ್ಯವಸಾಯಕ್ಕೆ ಉಪಯೋಗವಾಗುವುದಿಲ್ಲವೆಂದು ರಿಪೋರ್ಟ್ ಕೊಟ್ಟಿದ್ದರೂ ಇವತ್ತಿನವರೆಗೆ ಸಾಲವನ್ನು ಮನ್ನಾ ಮಾಡಿಲ್ಲ. ಆ ಭೂಮಿಯನ್ನು ಸ್ವಾಧೀನ ಮಾಡಿಕೊಂಡು ಪಂಪ್‌ಸೆಟ್ಟನ್ನು ಬೇರೆಯವರಿಗೆ ಮಾರಿಸಿ ಪಂಪ್‌ಸೆಟ್ಟಿನ ಹೆಡ್ ಕೆಳಗೆ ರಶೀತಿ ಹಾಕಿದ್ದಾರೆ. ಇಂಥ ಅವ್ಯವಹಾರಗಳು ಪಿಎಲ್‌ಡಿ ಬ್ಯಾಂಕಿನಲ್ಲಿ ಸರ್ವೇಸಾಮಾನ್ಯವಾಗಿವೆ. ಕಮಿಟಿಯನ್ನು ರೆಗ್ಯುಲರ್ ಆಗಿ ಇನ್‌ಸ್ಪೆಕ್ಟ್ ಮಾಡುವಂತೆ ಮಾಡಿ, ಇಲ್ಲವೇ ಪ್ರೊಸೀಡಿಂಗ್ಸ್ ಅನ್ನು ಸಿಂಪ್ಲಿಫೈ ಮಾಡಿ. ಜಿಯಾಲಜಿಸ್ಟ್ ನೀರವಾಗಿ ಬ್ಯಾಂಕಿಗೆ ವರದಿ ಕೊಡುವಂತೆ ಪ್ರೊಸೀಜರ್ ಅನ್ನು ಸಿಂಪ್ಲಿಫೈ ಮಾಡಿದರೆ ರೈತರಿಗೆ ಅನುಕೂಲವಾಗುತ್ತದೆ. ಇದರ ಬಗ್ಗೆ ಯೋಚನೆ ಮಾಡಿದ್ದೀರಾ ?

ಶ್ರೀ ಹೆಚ್. ವಿಶ್ವಾಂತಯ್ಯ.—ಈಗ ಜಾರಿಯಲ್ಲಿರುವಂಥ ಆದೇಶದ ಪ್ರಕಾರ ಕೆಲವು ಅವಧಿಯಲ್ಲಿ ಮಾತ್ರ ನಾವು ವಿಫಲವಾದ ಬಾವಿ ಎಂದು ಪರಿಗಣಿಸುವುದಕ್ಕೆ ಸಾಧ್ಯತೆ ಇದೆ ಮಳೆಗಾಲದಲ್ಲಿ ಪರೀಕ್ಷಿಸುವುದಕ್ಕೆ ಹೋದರೆ ವಿಫಲವಾದ ಬಾವಿ ಎಂದು ಹೇಳುವುದಕ್ಕೆ ಸಾಧ್ಯವಾಗದೆ ಬೋಗಬಹುದು. ಆದಕ್ಕೋಸ್ಕರ ನವೆಂಬರ್‌ನಿಂದ ಏಪ್ರಿಲ್‌ವರೆಗೆ ಪರೀಕ್ಷೆ ಮಾಡಿಸುತ್ತೇವೆ. ಸಂಬಂಧಪಟ್ಟ ಅಧಿಕಾರಿಗಳು ವರದಿ ಕೊಟ್ಟಮೇಲೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ ಮಾನ್ಯ ಸದಸ್ಯರು ಹೇಳಿದಂತೆ ತೊಂದರೆಯಾಗಿದ್ದರೆ ಅದರ ಬಗ್ಗೆ ಪರಿಶೀಲಿಸಲು ಸರ್ಕಾರ ಸಿದ್ಧವಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಈಗ ೩ ಆರ್ಡರ್‌ಗಳು ಇವೆ. ಈಗ ಪಿಎಲ್‌ಡಿ ಬ್ಯಾಂಕಿನವರು, ತಹಶೀಲ್ದಾರರು ಮತ್ತು ಜಿಯಾಲಜಿಸ್ಟ್ ಈ ಮೂವರು ಒಟ್ಟಿಗೆ ಹೋಗಿ ನೋಡಬೇಕೆಂದು ಇದೆ. ಆವಕ್ಕೆ ಹಿಂದೆ ಅಸಿಸ್ಟೆಂಟ್ ಕಮೀಷನರ್ ಅಧ್ಯಕ್ಷತೆಯಲ್ಲಿ ಮೀಟಿಂಗ್ ಜರುಗುತ್ತಿತ್ತು. ಆಗ ಬಿಡಿಒ ಮತ್ತು ತಹಶೀಲ್ದಾರರು ಜಾಯಿಂಟ್ ಇನ್‌ಸ್ಪೆಕ್ಷನ್ ಮಾಡಬೇಕೆಂದು ನಿಯಮವಿತ್ತು, ಅವರಿಬ್ಬರೂ ರಿಪೋರ್ಟ್ ಕೊಟ್ಟರೆ ವಿಫಲವಾದ ಬಾವಿಗೆ ಎ.ಸಿ. ಯವರು ಪರಿಹಾರ ಕೊಡುತ್ತಿದ್ದರು. ಆ ಆಜ್ಞೆ ಜೂನ್ ೧೯೪೪ಕ್ಕೆ ಹಿಂದೆ ಇದ್ದುದರಿಂದ ಆ ಪ್ರಕಾರ ಅರ್ಜಿ ಹಾಕಿದ್ದಾರೆ. ಈಗ ಆ ಆರ್ಡರ್ ಹೋಗಿರುವುದರಿಂದ ಟೆಕ್ನಿಕಲಿ ನಾಟ್ ಎಂಟೈಟಲ್ಡ್ ಎಂದು ಅರ್ಜಿಗಳನ್ನು ರಿಜೆಕ್ಟ್ ಮಾಡುತ್ತಿದ್ದಾರೆ. ಹಿಂದೆ ತೆಗೆದ ಬಾವಿ ಫೆಯಿಲ್ ಆಗಿದ್ದು ಈಗ ಅರ್ಜಿ ಕೊಡುವುದಕ್ಕೆ ಹೋದರೆ ತೆಗೆದುಕೊಳ್ಳುವುದಿಲ್ಲ. ಟೆಕ್ನಿಕಲ್ ಗ್ರೌಂಡ್ ಇಟ್ಟುಕೊಂಡು ರೈತರ ಅರ್ಜಿಗಳನ್ನು ತಿರಸ್ಕರಿಸುತ್ತಾರೆ ಆದ್ದರಿಂದ ಎಲ್ಲಾ ವಿಫಲವಾದ ಬಾವಿಗಳಿಗೆ ಪರಿಹಾರ ಕೊಡುವ ಆಜ್ಞೆಯನ್ನು ಹೊರಡಿಸುತ್ತೀರಾ? ನೀವು ಟೆಕ್ನಿಕಲ್ ಗ್ರೌಂಡ್ ಮೇಲೆ ಡಿಪೆಂಡ್ ಆಗದೆ ವಿಫಲವಾದ ಬಾವಿಗಳಿಗೆ ಪರಿಹಾರ ಕೊಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಹೆಚ್. ವಿಶ್ವಾಂತಯ್ಯ.—ಮಾನ್ಯ ವೆಂಕಟರಾಮಯ್ಯನವರು ತಾವು ಹೇಳಿದ್ದು ಎಷ್ಟರ ಮಟ್ಟಿಗೆ ಸರಿ ಎಂದು ತಿಳಿದುಕೊಂಡಿದ್ದಾರೋ ಗೊತ್ತಿಲ್ಲ. ಮಾನ್ಯ ಮಿತ್ರರು ಹೇಳಿದ ಹಾಗೆ ಇತ್ತೀಚೆಗೆ ಹೊಸ ಆರ್ಡರ್ ಬಂದಿದೆ. ೧೯೪೪ರಲ್ಲಿ ತೆರದ ಬಾವಿಗಳಿಗೆ ಹೊಸ ಆದೇಶ ಮಾಡಿದ್ದೇವೆ. ಆದೇ ರೀತಿ ಬೋರ್‌ವೆಲ್‌ಗಳಿಗೆ ಹೋದ ತಿಂಗಳು ಹೊಸ ಕಾನೂನು ಮಾಡಿದ್ದೇವೆ. ಆದರೆ ಅಡಿಯಲ್ಲಿ ಬರುವ ಬಾವಿಗಳಿಗೆ ಪರಿಹಾರ ಸಿಗದಿದ್ದರೆ ಕೊಡಿಸುತ್ತೇನೆ. ತಾಂತ್ರಿಕ ಕಾರಣದಿಂದ ಪರಿಹಾರ ನೀಡುವುದರಲ್ಲಿ ತೊಂದರೆ ಮಾಡುತ್ತಿಲ್ಲ. ಅಂಥ ತಾಂತ್ರಿಕ ಕಾರಣಗಳೇನಾದರೂ ಇದ್ದರೆ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್. ಎಸ್. ಕಡಪಟ್ಟಿ.—ವಿಫಲವಾದ ಬಾವಿಗಳ ಬಗ್ಗೆ ಹೇಳುವುದಾದರೆ, ನಮ್ಮ ತಾಲ್ಲೂಕಿನ ಬೆಳಗೊಳ ಎಂಬ ಗ್ರಾಮದಲ್ಲಿ ಒಬ್ಬ ಬಡವ ಬಾವಿ ತೆಗೆದು ಅನೇಕ ವರ್ಷಗಳಿಂದ ತೊಂದರೆಪಡುತ್ತಿದ್ದಾನೆ, ಅದನ್ನು ಸರ್ಕಾರದ ಗಮನಕ್ಕೆ ತಂದಿದ್ದರೂ ಇದುವರೆಗೂ ಪರಿಹಾರ ಸಿಕ್ಕಿಲ್ಲ. ತಾಂತ್ರಿಕ ದೋಷದಿಂದ ಅಥವಾ ಇನ್ನಿತರ ಯಾವುದೇ ದೋಷದಿಂದ ಅಡಚಣೆಯಿಂದ ಅದು ನಿಂತಿರಬಹುದು. ಅದನ್ನು ಇದುವರೆಗೆ ಸರಿಪಡಿಸುವುದಕ್ಕೆ ಕ್ರಮ ಕೈಗೊಂಡಿಲ್ಲ. ಬಾವಿ ನೀರನ್ನು ಟೆಸ್ಟಿಗೆ ಕಳುಹಿಸಿದ್ದೇವೆ, ಕೆಟ್ಟ ವಿಷ ಇದ್ದ ಹಾಗೆ ಇದೆ. ಎಲ್ಲೋ ಸ್ವಲ್ಪ ನೀರು ಬರುತ್ತದೆ. ಆದ್ದರಿಂದ ಇದನ್ನು ಸರಳಗೊಳಿಸಿ ರೈತರಿಗೆ ತೊಂದರೆಯಾಗದಂತೆ ಎಲ್ಲಾ ವಿಫಲವಾದ ಬಾವಿಗಳಿಗೆ ತೀವ್ರವಾಗಿ ನೇರವಾಗಿ ಪರಿಹಾರ ದೊರಕಿಸುವ ಆಜ್ಞೆ ಮಾಡುತ್ತೀರಾ?

ಶ್ರೀ ಎಚ್. ವಿಶ್ವಾಂತಯ್ಯ.—ಸನ್ಮಾನ್ಯ ಅಧ್ಯಕ್ಷರೆ, ಯಾವ ಬಾವಿಯಿಂದ ಬಂದಂಥ ನೀರು ನೀರಾವರಿಗೆ ಯೋಗ್ಯವಾಗಿಲ್ಲ ಎಂದು ಕಂಡುಬರುತ್ತದೆ. ಇಂಥ ಬಾವಿಯನ್ನು ಖಂಡಿತವಾಗಿ ವಿಫಲ ಬಾವಿ

ಎಂದು ಪರಿಗಣಿಸಿ ಸಹಾಯ ಮಾಡುತ್ತೇವೆ, ತೆರೆದ ಬಾವಿಯಲ್ಲಿ ೫೦೦೦ ಗ್ಯಾಲನ್‌ಗಿಂತ ಕಡಿಮೆ ನೀರು ರಬಿ ಸೀಸನ್‌ನಲ್ಲಿ ಬಂದರೆ ಅದನ್ನು ಕೂಡ ವಿಫಲಬಾವಿ ಎಂದು ಪರಿಗಣಿಸಿ ಸರ್ಕಾರ ಸಹಾಯ ಮಾಡುತ್ತದೆ. ಮತ್ತು ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎ ಕೃಷ್ಣಪ್ಪ.—ಶ್ರೀಮತಿ ಬಿ ಕಮಲಮ್ಮ ಎನ್ನುವವರ ಬಗ್ಗೆ ವಿವರವನ್ನು ಕೊಟ್ಟಿದ್ದೀರಿ, ವಿಫಲವಾದ ಬಾವಿ ಎಂದು ತಾವು ಹೇಳಿದ್ದೀರಿ. ಅವರಿಗೆ ಬಡ್ಡಿಯನ್ನು ಮಾತ್ರ ಮನ್ನಾ ಮಾಡುತ್ತೇವೆಂದು ಹೇಳಿದ್ದೀರಿ. ಈಗಿನ ಪರಿಸ್ಥಿತಿ ಮತ್ತು ತಮ್ಮ ಆರ್ಡರ್ ನೋಡಿ ಪೂರ್ತಿ ಸಾಲವನ್ನು ಮನ್ನಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ವಿಶ್ವನಾಥಯ್ಯ —ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಿತ್ರರು ಹೇಳಿದ ವಿಷಯ ಇವತ್ತು ಮಾಡಿದ ಆದೇಶ ಅಲ್ಲ. ೧೯೭೮ನೇ ಇಸವಿಯ ಜನವರಿ ತಿಂಗಳು ೧೩ನೇ ತಾರೀಖು ಮಾಡಿದ ಆದೇಶ ಅದು. ಆವತ್ತು ಜಾರಿಯಲ್ಲಿದ್ದ ಆದೇಶದ ಪ್ರಕಾರ ಜಿಲ್ಲಾಧಿಕಾರಿಗಳು ಕ್ರಮ ತೆಗೆದುಕೊಂಡಿದ್ದಾರೆ. ಆದ್ದರಿಂದ ಸರ್ಕಾರ ಇವತ್ತು ಪುನರ್‌ಪರಿಶೀಲಿಸುವುದು ಸಾಧ್ಯ ಇಲ್ಲ.

ಪ್ರಶ್ನೆ ಸಂಖ್ಯೆ ೧೯೧ (೮೫೫)
ಪ್ರಶ್ನೆ ಸಂಖ್ಯೆ ೧೯೨ (೯೫೫)
ಪ್ರಶ್ನೆ ಸಂಖ್ಯೆ ೧೯೩ (೧೩೯) } ಸದಸ್ಯರುಗಳು ಹಾಜರಿರಲಿಲ್ಲ.
ಪ್ರಶ್ನೆ ಸಂಖ್ಯೆ ೧೯೪ (೧೦೨೭)

ದಕ್ಷಿಣ ಕನ್ನಡದಲ್ಲಿ ಸಹಕಾರಿ ಸಂಘಗಳು

೫೮೪. ಶ್ರೀ ಬಿ. ಎಂ ಇದಿನಬ್ಬ (ಉಳ್ಳಾಲ). — ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರ ?

ಅ) ದಕ್ಷಿಣ ಕನ್ನಡದಲ್ಲಿರುವ ಸಹಕಾರಿ ಸಂಘ ಸಂಸ್ಥೆಗಳ ಸಂಖ್ಯೆ ಎಷ್ಟು ?

ಆ) ೧೯೫೫-೫೬, ೧೯೮೬-೮೭ನೇ ಡಿಸೆಂಬರ್ ಅಂತ್ಯದವರೆಗೆ ಲಾಭದಲ್ಲಿರುವ ಸಹಕಾರ ಸಂಘಗಳ ಸಂಖ್ಯೆ ಎಷ್ಟು ಹಾಗೂ ನಷ್ಟದಲ್ಲಿರುವ ಸಂಘಗಳ ಸಂಖ್ಯೆ ಎಷ್ಟು ? (ವಿವರ ಒದಗಿಸುವುದು)

ಇ) ಸದರಿ ಸಹಕಾರ ಸಂಘಗಳಲ್ಲಿ ಯಾವುದಾದರಲ್ಲಿ ಹಣ ದುರುಪಯೋಗವಾಗಿವೆಯೇ, ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮಗಳೇನು ? (ವಿವರ ಒದಗಿಸುವುದು)

ಶ್ರೀ ಹೆಚ್. ವಿಶ್ವನಾಥಯ್ಯ (ಸಹಕಾರ ಮಂತ್ರಿಗಳು).—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದಿನಾಂಕ ೩೦-೬-೧೯೮೭ಕ್ಕೆ ಒಟ್ಟು ೧೦೨೨ ಸಹಕಾರ ಸಂಘಗಳಿರುತ್ತವೆ. ಇವುಗಳ ಜೊತೆಗೆ ೧೧೪ ಸಹಕಾರ ಸಂಘಗಳು ಸಮಾಪನಾದಂತದಲ್ಲಿರುತ್ತವೆ.

ಆ) ೧೯೫೫-೫೬ನೇ ಸಾಲಿಗೆ ಲಾಭದಲ್ಲಿ ೪೬೫ ಸಹಕಾರ ಸಂಘಗಳು, ನಷ್ಟದಲ್ಲಿ ೪೩೪ ಸಹಕಾರ ಸಂಘಗಳು ಹಾಗೂ ೧೯೮೬-೮೭ನೇ ಸಾಲಿಗೆ ಲಾಭದಲ್ಲಿ ೫೧೪ ಸಹಕಾರ ಸಂಘಗಳು, ನಷ್ಟದಲ್ಲಿ ೪೭೫ ಸಹಕಾರ ಸಂಘಗಳು ಇವೆ.

ಇ) ಸದರಿ ಸಹಕಾರ ಸಂಘಗಳ ಪೈಕಿ ದಿನಾಂಕ ೩೦-೧೨-೧೯೮೭ಕ್ಕೆ ಇದ್ದಂತೆ ೧೧೫ ಸಹಕಾರ ಸಂಘಗಳಲ್ಲಿ ೧೫೨ ಹಣ ದುರುಪಯೋಗ ಪ್ರಕರಣಗಳು ಬೆಳಕಿಗೆ ಬಂದಿದ್ದು, ದುರುಪಯೋಗಗೊಳಿಸಿದ ಮೊತ್ತ ರೂ. ೧,೦೪,೭೫,೬೯೯-೨೬ ಗಳಾಗಿರುತ್ತವೆ. ಈ ಪೈಕಿ ೨೫ ಪ್ರಕರಣಗಳಲ್ಲಿ ಪೂರ್ಣವಾಗಿಯೂ, ೨೮ ಪ್ರಕರಣಗಳಲ್ಲಿ ಭಾಗಶಃವಾಗಿ ಒಟ್ಟು ರೂ. ೧೫,೬೩,೪೭೦-೮೯ಗಳು ವಸೂಲಿಯಾಗಿರುತ್ತದೆ. ರೂ. ೮೯,೧೧,೯೧೮-೩೭ಗಳು ೨೨೭ ಪ್ರಕರಣಗಳಲ್ಲಿ ವಸೂಲಿಯಾಗಬೇಕಾಗಿರುತ್ತದೆ. ಈ ಪೈಕಿ ೧೦೨ ಪ್ರಕರಣಗಳಲ್ಲಿ ಬಡ್ಡಿ ಸೇರಿ ೯೦,೪೩,೯೪೨-೨೬ ರೂ.ಗಳಿಗೆ ಸಿವಿಲ್ ದಾವೆ ಹೂಡಲಾಗಿದೆ. ೪೪ ಪ್ರಕರಣಗಳಲ್ಲಿ ೮೪,೨೦,೩೬೦-೨೦ ರೂ. ಗಳನ್ನೊಳಗೊಂಡಿರುವ ದುರುಪಯೋಗಕ್ಕೆ ಕ್ರಿಮಿನಲ್ ಮೊಕದ್ದಮೆ ಹೂಡಲಾಗಿದೆ.